

ಅರೊವಿಲ್ಲೆಯ ದಾರಿಯಲ್ಲಿ ಹಿರಿಯ ಜೀವಗಳು

ಕಣ್ಸೆಳೆಯುವ ಸಂದೇಶ

ಅಲೆಯ ಅಬ್ಬರವಿಲ್ಲದ ಸಾಗರಕ್ಕೆ ಮುಖ ಮಾಡಿ ಕುಳಿತ ಅದೆಷ್ಟೋ ಸಹಸ್ರ ಮಂದಿ. ಸರಸರನೆ ಧಾವಿಸಿ ಬುವಿಗೆ ಹೊದಿಕೆಯಾಗುತ್ತಿದ್ದ ಕತ್ತಲು. ಆ ಕತ್ತಲಿಗೆ ಸವಾಲೆಸೆದಂತೆ ಮಿನುಗುತ್ತಿದ್ದ ಬೀದಿ ದೀಪಗಳು. ಇದ್ಯಾವುದರ ಪರಿವೆಯಿಲ್ಲದ ಸಾಗರದ ಜೊತೆ ಅನುಸಂಧಾನ ನಡೆಸುತ್ತಿದ್ದ ಆ ಮಂದಿ.

ಪಶ್ಚಿಮ ಕರಾವಳಿಯ ಎಷ್ಟೆಲ್ಲ ಕಡಲ ತೀರಗಳನ್ನು ಕಂಡಿದ್ದೇನೆ. ಸೂರ್ಯಾಸ್ತದ ಸೊಬಗನ್ನು ಅನುಭವಿಸಿದ್ದೇನೆ. ಆದರೆ, ಪೂರ್ವ ಕರಾವಳಿಯಲ್ಲಿರುವ ಪಾಂಡಿಚೆರ್ರಿ ಅಥವಾ ಪುದುಚೇರಿ ಕಡಲ ತೀರ ಮಾತ್ರ ನೀರಾಟದ ದಡವಲ್ಲ, ಅದೊಂದು ಧ್ಯಾನ ಮಂದಿರದಂತೆ ಭಾಸವಾಯಿತು. ಮನದ ದುಗುಡಗಳನ್ನು ಕಳಚಿಕೊಳ್ಳುವ ಅಧ್ಯಾತ್ಮದ ಸೆಲೆಯಾಗಿ ಕಂಡಿತು.

ಪುದುಚೇರಿಪೇಟೆಯ ಯಾವ ರಸ್ತೆ ಹಿಡಿದು ಹೋದರೂ ಕೊನೆಯಲ್ಲಿ ಲೀನವಾಗುವುದು ಕಡಲಿನಲ್ಲೇ. ಆರೆಂಟು ಜನರ ನಮ್ಮ ತಂಡ, ಪೇಟೆಯೆಲ್ಲ ಸುತ್ತಿ ಮುಸ್ಸಂಜೆಯ ಹೊತ್ತಿಗೆ ಸಮುದ್ರದೆಡೆಗೆ ಮುಖ ಮಾಡಿದೆವು. ಎಲ್ಲ ರಸ್ತೆಯ ಗಡಿಯಲ್ಲಿ ಬ್ಯಾರಿಕೇಡ್‌ಗಳು, ಪೊಲೀಸರು. ಅಲ್ಲಿಂದ ಮುಂದೆ ವಾಹನ ಸಂಚಾರ ನಿಷೇಧ. ನಮಗದರ ಅರಿವಿಲ್ಲ. ಹೊರ ರಾಜ್ಯ ನೋಂದಣಿಯ ವಾಹನಕ್ಕೆ ಪ್ರವೇಶವಿಲ್ಲವೆಂದುಕೊಂಡು ಕಾಲ್ನಡಿಗೆಯಲ್ಲಿ ಹೊರಟೆವು.

ಆದರೆ, ವಿಶಾಲ ರಸ್ತೆಯಲ್ಲಿ ನೂರಾರು ಜನರು ನಮ್ಮ ಹಾಗೆ ನಡೆದುಕೊಂಡೇ ಬರುತ್ತಿದ್ದರು. ಹಾಗೆ ಹೋಗುತ್ತಿರುವ ಎಲ್ಲರ ಗುರಿಯೂ ಕಡಲ ಕಿನಾರೆ ತಲುಪುವುದೇ ಆಗಿತ್ತು. ನಾವು ಅಲ್ಲಿ ಸೇರುವಷ್ಟರಲ್ಲಿ ಸಾವಿರಾರು ಜನರಿದ್ದರು. ಹರೆಯದ ಜೋಡಿಗಳು ತೋಳು ಬಂದಿಗಳಾಗಿ ಕಿರುದನಿಯ ಸಲ್ಲಾಪದಲ್ಲಿ ಮರಳ ಮೇಲೆ ಹೆಜ್ಜೆ ಹಾಕುತ್ತಿದ್ದರು. ಮಧ್ಯ ವಯಸ್ಸಿನವರು ತಮ್ಮ ಪುಟ್ಟ ಮಕ್ಕಳ ಉಸುಕಿನಾಟ ನೋಡಿ ಖುಷಿಪಡುತ್ತಿದ್ದರು. ಇಳಿವಯಸ್ಸಿನ ದಂಪತಿಗಳು ಧ್ಯಾನಕ್ಕೆ ಕುಳಿತವರ ಹಾಗೆ ಮೌನಿಗಳಾಗಿದ್ದರು. ಕಡುಗತ್ತಲೆ ಇರುವ ಜಾಗವನ್ನೇ ಆಯ್ಕೆ ಮಾಡಿಕೊಂಡು ಕುಳಿತಿದ್ದ ಒಂಟಿ ಜೀವಿಗಳು ಆತ್ಮನಿವೇದನೆ ಮಾಡಿಕೊಳ್ಳುತ್ತಿದ್ದರು. ಕಟ್ಟೆ, ಬೆಂಚು, ಬಂಡೆಗಲ್ಲು ಎಲ್ಲವೂ ಭರ್ತಿ.

70ರ ಆಸುಪಾಸಿನ ಅಜ್ಜನೊಬ್ಬ ಮೂರು ವರ್ಷದ ಮೊಮ್ಮಗುವನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ತದೇಕಚಿತ್ತದಿಂದ ಕಡಲನ್ನೇ ದಿಟ್ಟಿಸುತ್ತಿದ್ದ. ಆ ಮಗು ಅಜ್ಜನ ಕೈಯ ಕೊಂಡಿ ಬಿಡಿಸಿಕೊಂಡು ಪಕ್ಕಕ್ಕೆ ನೆಗೆಯುತ್ತಿತ್ತು. ಮೊಮ್ಮಗನ ಆಟ, ಅಲೆಯ ಹೊಯ್ದಾಟದಲ್ಲಿ ಅಜ್ಜ ಲೌಕಿಕವನ್ನೇ ಮರೆತಂತಿದ್ದ.

ವಿಶಾಲ ಸಾಗರದ ಎದುರು ಎಲ್ಲರೂ ಸಮಾನರಾಗಿದ್ದರು. ರುಜುವಿನ ಪೊರೆ ಕಳಚಿಕೊಂಡವರಂತೆ ನಿರಾಳರಾಗಿದ್ದರು. ಯಾರಿಗೂ ಯಾರ ಹಂಗಿರಲಿಲ್ಲ. ಯಾರಿಗೆ ಯಾರ ಬಗ್ಗೆ ಕುತೂಹಲವೂ ಇರಲಿಲ್ಲ. ಹಾಗೆಂದು ಅಲ್ಲಿ ಬಂದವರೆಲ್ಲರೂ ಪ್ರವಾಸಿಗರಾಗಿರಲಿಲ್ಲ.

‘ನಮ್ಮೂರಿನವರು ದೇವಾಲಯಕ್ಕೆ ಹೋಗುವ ಹಾಗೆ ನಿತ್ಯ ಸಂಜೆ ಕಡಲ ತೀರಕ್ಕೆ ಬರುತ್ತಾರೆ. ಅವರ ಒತ್ತಡವನ್ನೆಲ್ಲ ಸಮುದ್ರ ದಕ್ಕಿಸಿಕೊಂಡ ಮೇಲೆ ಮತ್ತೆ ರಿಫ್ರೆಶ್ ಆಗಿ ಮನೆಗೆ ಹೋಗುತ್ತಾರೆ’ ಎಂದು ಮುಗುಳ್ನಕ್ಕರು ಸಸಿಂದ್ರನ್.

ಕೂಗಳತೆ ದೂರದಲ್ಲಿರುವ ಅರಬಿಂದೋ ಆಶ್ರಮದ ಪ್ರಶಾಂತತೆ ಅಲ್ಲಿ ಪ್ರತಿಫಲಿಸಿದಂತಿತ್ತು. ದಡದಂಚಿನಲ್ಲಿದ್ದ ಮಹಾತ್ಮ ಗಾಂಧೀಜಿ ಬಣ್ಣದ ದೀಪದಲ್ಲಿ ಮಿಂಚುತ್ತಿದ್ದರು. ಅವರ ಪಾದತಲದಲ್ಲಿ ವಿನೀತರಾಗಿ ಕುಳಿತು ಖುಷಿ ಅನುಭವಿಸುತ್ತಿದ್ದರು ಪ್ರವಾಸಿಗರು. ನೆಹರೂ ಕಡಲಿಗೆ ಮುಖ ಮಾಡಿ ನಿಂತಿದ್ದರೆ, ಡೂಪ್ಲೆ ಅನಂತದೆಡೆಗಿನ ದಾರಿಯೆಡೆಗೆ ದೃಷ್ಟಿ ಬೀರಿದ್ದರು. ಮೂರು ಪ್ರತಿಮೆಗಳು ಮೂರು ರೀತಿ ಸಂದೇಶ ಸಾರುವಂತಿದ್ದವು.

ಅಲ್ಲಿ ಕಂಡ ಇನ್ನೊಂದು ಅಚ್ಚರಿಯೆಂದರೆ, ವಾಯುವಿಹಾರಕ್ಕೆ ಮೀಸಲಿಟ್ಟಿದ್ದ ರಸ್ತೆಯ ಬದಿಯಲ್ಲಿ ಒಂದೂ ತಳ್ಳುಗಾಡಿ ಇರಲಿಲ್ಲ. ಕಡ್ಲೆಪುರಿ ಮಾರುವವರು, ಪಾನಿಪುರಿ ಗಡಿಗೆ ಇಟ್ಟವರು ಕಾಣಲಿಲ್ಲ. ಬದಿಯ ಕಟ್ಟಡದಲ್ಲಿರುವ ಕೆಫೆಗಳಲ್ಲಷ್ಟೇ ಚಹಾ–ಕಾಫಿ ಹೀರಬಹುದು. ಒಂದೇ ಒಂದು ಕಾರು, ಬೈಕ್ ಕೂಡ ಆ ರಸ್ತೆಯಲ್ಲಿರಲಿಲ್ಲ. ಜೀವ ಮತ್ತು ಭಾವ ಇವೆರಡೇ ಅಲ್ಲಿ ಕಾಣುವ ಸಂಗತಿಗಳಾಗಿದ್ದವು.

ಜೇನ್ನೊಣಗಳಂತೆ ಜನರು ತುಂಬಿದ್ದರೂ, ಬೀದಿ ಅತ್ಯಂತ ಸ್ವಚ್ಛವಾಗಿತ್ತು. ಮದ್ಯದ ಬಾಟಲಿ, ಕವರ್‌ಗಳು ಕಡಲ ಬದಿಯಲ್ಲಿ ಹಾಕಿರುವ ಬಂಡೆಯ ನಡುವೆ ಕೂಡ ಇಣುಕಿರಲಿಲ್ಲ. ವಾಯುವಿಹಾರಕ್ಕೂ ನಿರ್ದಿಷ್ಟ ಸಮಯ ಮೀಸಲಿಡಲಾಗಿದೆ. ಅಷ್ಟರೊಳಗೆ ಎಲ್ಲರೂ ಜಾಗ ಖಾಲಿ ಮಾಡಬೇಕು. ಮೈಮರೆತು ಕುಳಿತರೆ ಪೊಲೀಸರು ಬಂದು ಎಚ್ಚರಿಸುತ್ತಾರೆ. ಹೀಗಾಗಿ, ಸಮಯ ಪಾಲನೆ ಮತ್ತು ಶಿಸ್ತಿಗೆ ಪ್ರವಾಸಿಗರು ಒಗ್ಗಿಕೊಂಡಂತೆ ಕಂಡರು. ಕರ್ಕಶ ಸಂಗೀತ, ಯುವಜನರ ಹಾರಾಟ, ಚೀರಾಟದಿಂದ ಮುಕ್ತವಾಗಿತ್ತು ಈ ಕಡಲ ತಡಿ.

ಕವಿಗಪ್ಪಳಿಸುವ ಬಂಗಾಳ ಕೊಲ್ಲಿಯ ಪುಟ್ಟ ಅಲೆಗಳು ಮನುಷ್ಯನ ಅಹಂ ಅನ್ನು ನಿಧಾನವಾಗಿ ತೊಳೆದುಕೊಂಡು ಹೋಗುತ್ತಿದ್ದವು. ■

## ಮಾತೃಮಂದಿರ–ಆರೊವಿಲ್ಲೆ

ನಗರದಿಂದ ತುಸು ದೂರದಲ್ಲಿರುವ ಮಾತೃಮಂದಿರ ಅಂದರೆ ಆರೊವಿಲ್ಲೆ, ಇದು ಅರಬಿಂದೊ ಆಶ್ರಮಕ್ಕೆ ಸಂಬಂಧಿಸಿದ ತಾಣ. ಇಲ್ಲಿ ಹೆಚ್ಚು ವಿದೇಶ ಪ್ರವಾಸಿಗರು ಕಾಣುತ್ತಾರೆ. ಇದು ಧ್ಯಾನ ಕೇಂದ್ರವೆಂದೇ ಪ್ರಸಿದ್ಧ. ಆರೊವಿಲ್ಲೆಯ ಚಿನ್ನದಂತಹ ‘ಗೋಲ’ ನೋಡಲು ಜನರು ಒಂದೇ ಸಮನೆ ನಡೆಯುತ್ತಾರೆ, ನಡೆಯುತ್ತಾರೆ. ಬೆಟ್ಟ–ಗುಡ್ಡ, ಹಳ್ಳಿಯ ಹಾಡಿ ನೆನಪಿಸುವ ಕಾಲುದಾರಿಯಲ್ಲಿ ಕಿಲೋಮೀಟರ್‌ಗಟ್ಟಲೆ ನಡೆದ ಮೇಲೆ ಮಾತೃಮಂದಿರ ತೆರೆದುಕೊಳ್ಳುತ್ತದೆ.

ಇಲ್ಲಿ ನನ್ನನ್ನು ಆಕರ್ಷಿಸಿದ್ದು ದಾರಿ ತುಂಬ ಸಿಗುವ ಫಲಕಗಳು. ಅಂತಃಚಕ್ಷುವನ್ನು ಎಚ್ಚರಿಸುವ ಮಾನವತೆಯ ಸಂದೇಶದ ಈ ಫಲಕಗಳು ದಾರಿಯ ದಣಿವನ್ನು ಮರೆಸುವಂತಿವೆ. ವಿದೇಶಿ ಪ್ರವಾಸಿಗರು ನಿಂತು ಹೆಚ್ಚು ಕುತೂಹಲದಿಂದ ಇವುಗಳನ್ನು ಓದಿ ಮುಂದಡಿಯಿಡುತ್ತಿದ್ದರು. ಕೋಲು ಊರಿ ಮುಂದಡಿಯಿಡುವ ಜೀವಗಳು ವಿರಾಮಕ್ಕಾಗಿ ಈ ಫಲಕಗಳನ್ನು ಆಶ್ರಯಿಸಿ ನಿಲ್ಲುತ್ತಿದ್ದರು. ಮಂಜಾದ ದೃಷ್ಟಿಯನ್ನು ಮರೆತು ಅವನ್ನು ಓದಿ ಪರಸ್ಪರ ಮುಗುಳ್ನಗುತ್ತಿದ್ದರು.